

# ಕಳಸದ ಶಿಲೆ

ಚಿತ್ರಬರಹ:
**ಎಸ್. ಶಶಿಕಲಾ**



**ಚಿ**ಕ್ಕಮಗಳೂರು ಜಿಲ್ಲೆಯ ಕಳಸದಿಂದ ಹೊರನಾಡಿಗೆ ತೆರಳುವ ಮಾರ್ಗದುದ್ದಕ್ಕೂ 2 ಕಿ.ಮೀ ಕ್ರಮಿಸಿದರೆ ಅಲ್ಲೊಂದು ಸಂತೆಯಂತಹ ಚಿಕ್ಕ ಸ್ಥಳ ಸಿಗುತ್ತದೆ. ಅಲ್ಲಿಂದ ಎಡಕ್ಕೆ ತಿರುಗಬೇಕು. ಸ್ವಲ್ಪ ದೂರದಲ್ಲೇ ಮತ್ತೆ ಬಲಕ್ಕೆ ಹೊರಳಿ ಕಡಿದಾದ ರಸ್ತೆಯಲ್ಲಿ ಇಳಿದರೆ ಭದ್ರಾ ನದಿ ಎದುರಾಗುತ್ತದೆ. ಸುತ್ತಲೂ ಹಸಿರು ಸಿರಿ. ಆನೆ ಮಲಗಿದಂತೆ ಕಾಣುವ ಗುಡ್ಡ. ಜುಳುಜುಳು ಹರಿವ ನೀರು. ಹಕ್ಕಿಗಳ ಕಲರವ.

ಈ ಸೌಂದರ್ಯವನ್ನು ಸವಿಯುತ್ತಾ ಅಲ್ಲಿರುವ ಬಂಡೆಗಳತ್ತ ಕಣ್ಣು ಹಾಯಸಿದರೆ ನಮಗೇ ಗೊತ್ತಿಲ್ಲದಂತೆ ವಾಹ್.. ಎನ್ನುವ ಉದ್ಗಾರ ಹೊರಹೊಮ್ಮುತ್ತದೆ. ಇಲ್ಲಿರುವ ಬಂಡೆಗಳನ್ನು ಯಾವ ಶಿಲ್ಪಿ ಕಡೆದು ಹೀಗೆ ಆಕೃತಿ ಮೂಡಿಸಿದ್ದಾನೋ... ಎನ್ನುವ ಕುತೂಹಲ ಉಂಟಾಗುತ್ತದೆ.

**(8ನೇ ಪುಟ ನೋಡಿ)**